ಆಯುಷ್ಯ ಇನ್ನು ಎರಡು ತಿಂಗಳೆಂಬುದು ಖಂಡಿತ. ಈ ಪರಿಸ್ಥಿತಿಗೆ ನಾನು ಹೊಂದಿಕೊಳ್ಳಲೇಬೇಕು. ಡಾ|| ರಾಧಾಕೃಷ್ಣನ್ ಹೇಳುವ ಮಾತೊಂದು ನೆನಪಿಗೆ ಬಂತು... 'ಯಾವುದೇ ಒಂದು ಘಟನೆಯನ್ನು ಸಹ ನಾವು ಬದಲಾಯಿಸಲಾರೆವು... ಆದರೆ ಆ ಘಟನೆಯ ಬಗ್ಗೆ ನಮ್ಮ ದೃಷ್ಟಿಕೋನವನ್ನು ಖಂಡಿತ ಬದಲಾಯಿಸಿಕೊಳ್ಳಬಲ್ಲೆವು.' ನನ್ನ ಸಾವು ಎಂಬ ಈ ಘಟನೆಯನ್ನು ಯಾರೂ ಬದಲಾಯಿಸಲಾರರು– ನಾನೂ ಇದರಿಂದ ತಪ್ಪಿಸಿಕೊಳ್ಳಲಾರೆ. ಆದರೆ ಈ ಸಾವಿನ ಬಗ್ಗೆ ನನ್ನ ದೃಷ್ಟಿಕೋನವನ್ನೇ ಬದಲಾಯಿಸಿಕೊಂಡು ಬಿಟ್ಟರೆ!... ಹೌದು... ನಾನು ಸಾಯುವುದು ದಿಟ; ಅಂಥ ಪ್ರಖ್ಯಾತ ಡಾಕ್ಟರರು ಈ ಗುರುತರ ಸತ್ಯವನ್ನು ತಮಾಷೆಗಾಗಿ ಖಂಡಿತ ಹೇಳಲಾರರು– ನನ್ನ ಆಯುಷ್ಯ ಇನ್ನೆರಡೇ ತಿಂಗಳು. ಈ ಯೋಚನೆ ನನ್ನ ಮಿದುಳನ್ನು ಹೊಕ್ಕೊಡನೆಯೇ ಪ್ರತಿಕ್ಷಣ ಸಹ ನನ್ನ ಪಾಲಿಗೆ ಮಹತ್ವದ್ದೆನಿಸತೊಡಗಿತು. ಬಸ್ ಚಲಿಸುತ್ತಿದೆ– ಎಲ್ಲಿಗೆ? ಸೀದಾ ಮೃತ್ಯುವಿನೆಡೆಗೆ ನಾವೆಲ್ಲರೂ ನಿತ್ಯವೂ ಈ ಬಾಳಿನ ಬಂಡಿಯನ್ನು ನಡೆಸುತ್ತಾ ಹೊರಟಿದ್ದೇವೆ. ಸೀದಾ ಸಾವಿನ ಬಾಯೊಳಗೆ– ನಾನೀಗ ಸಾವಿನ ತೀರಾ ಸನಿಹಕ್ಕೆ ಬಂದು ತಲುಪಿದ್ದೇನೆ. ಸಾಗುತ್ತಿರುವ ಬಸ್ ವೇಗವಾಗಿ ಆ ಮೃತ್ಯುವಿನ ಬಾಯಿಯೊಳಗೆ ಹೋಗುತ್ತಿದೆ ಎನ್ನಿಸಿತು. ಸುಶೀ ನನ್ನಂಥ ಅಲ್ಪಾಯುಷಿಯನ್ನೇಕೆ ಕೈಹಿಡಿದೆ? ಮುರಳಿ, ಶ್ರೀಧರ ಇಬ್ಬರೂ ಪರದೇಶಿಗಳಾಗಿ ಬಿಡುತ್ತಾರೆ. ಅಯ್ಯೋ ನನ್ನ ಸುಶೀ –ನೀನೆಷ್ಟು ಚೆಲುವೆ? ನಾನು ಸತ್ತ ನಂತರ ನಿನ್ನ ಆ ಚೆಲುವು... ಯೌವ್ವನ... ಎಲ್ಲವೂ ವ್ಯರ್ಥವಾಗುತ್ತದೆ! ಸುಶೀ ನೀನು ಬೇರೊಂದು ಲಗ್ನವಾಗು... ನಿನ್ನ ಆ ಎರಡು ಮುದ್ದು ಮಕ್ಕಳನ್ನು ಸಾಕುವ ಸಲುವಾಗಿಯಾದರೂ ನೀನು ಏನಾದರೂ ಮಾಡಲೇಬೇಕಾಗುತ್ತದೆ. ನಿನ್ನ ಸೌಂದರ್ಯ ನಿನ್ನ ಬಾಳಿನ ಹಾದಿಯಲ್ಲಿ ಮುಳ್ಳು ಕಲ್ಲುಗಳನ್ನೇ ಚೆಲ್ಲಬಹುದು. ನೂರಾರು ಕಾಮುಕ ಕಣ್ಣುಗಳು ನಿನ್ನನ್ನು ಹಿಂಬಾಲಿಸಬಹುದು. ನಿಮ್ಮಣ್ಣನ ಮನೆಗಾದರೂ ನೀನು ಹೋದರೆ... ಮುರಳಿಯಂತೂ ತುಂಬಾ ಬುದ್ಧಿವಂತ... ಅವನನ್ನು ಮೆಡಿಕಲ್ ಓದಿಸಬೇಕೆಂದುಕೊಂಡಿದ್ದೆ ನಾನು! ಶ್ರೀಧರ ಇನ್ನೂ ಚಿಕ್ಕ ಮಗು. ಇನ್ಶೂರೆನ್ಸ್ ಸಹ ನಾನು ಜಾಸ್ತಿ ಮಾಡಿಸಿಲ್ಲವಲ್ಲ!

ಬಸ್ ಮತ್ತೆ ನಿಂತಿತು... ಹೌದು... ನನ್ನ ಹಳ್ಳಿ ಬಂದೇ ಬಿಟ್ಟಿತು. ಬಸ್ಸಿನಿಂದ ಲಗುಬಗೆಯಾಗಿ ಕೆಳಗಿಳಿದು ಮನೆಯಕಡೆ ಹೆಜ್ಜೆ ಹಾಕತೊಡಗಿದೆ. ಹೆಜ್ಜೆಗಳು ವಿಪರೀತ ಭಾರವಾಗುತ್ತಿದ್ದವು. ನನ್ನ ಮೈಯ ನರನಾಡಿಗಳೆಲ್ಲ ಸಾವು ಆಗಲೇ ತನ್ನ ಬಲವಾದ ಮುದ್ರೆಯನ್ನೇ ಒತ್ತತೊಡಗಿತ್ತು. ಮನೆಗೆ ಹೋದೊಡನೆಯೇ ಸುಶೀ ಕೇಳುತ್ತಾಳೆ– 'ಏನು ಹೇಳಿದ್ರು ಡಾಕ್ಟ್ರು?' ಅವಳಿಗೆ ಏನೆಂದು ನಾನು ಉತ್ತರ ಹೇಳಲಿ? ನನ್ನ ಮುಖಭಾವವನ್ನು ಸೂಕ್ಷ್ಮವಾಗಿ ಗಮನಿಸಿ ಸುಶೀ ತೀರಾ ಗಾಬರಿಯಾಗಿ ಬಿಟ್ಟರೆ? ಉಹುಃ... ಇದಕ್ಕೆ ಅವಕಾಶ ಕೊಡಬಾರದು–ಗೆಲುವಾಗಿ ಮನೆಯನ್ನು ಪ್ರವೇಶಿಸಬೇಕು. ಮಕ್ಕಳಿಗೆ ಏನಾದರೂ ಹಣ್ಣು ತರಬಹುದಾಗಿತ್ತು. ಹಾಳು ಈ ಡಾಕ್ಟರ್ ನುಡಿದ ಭವಿಷ್ಯವಾಣಿಯಿಂದ ಕಂಗಾಲಾಗಿ ಏನೂ ತೋಚದೆ ಬರಿಗೈಲಿ ಬರುವಂತಾಯ್ತು. ಚನ್ನಪ್ಪನ ಪೆಟ್ಟಿಗೆ ಅಂಗಡಿಬಳಿ ನಿಂತು ರಸಬಾಳೆ ಹಣ್ಣು, ಒಂದು ಬಿಸ್ಕತ್ ಪೊಟ್ಟಣ ಕೊಂಡು, ಮನೆಯ ಬಾಗಿಲಿಗೆ ಬಂದೆ. ಬಾಗಿಲಲ್ಲೇ ಕಾತರಳಾಗಿ ಕಾದು ಕೂತಿದ್ದ ಸುಶೀ ಎದ್ದು ನಿಂತು ನನಗೆ ಸ್ವಾಗತ ಕೋರಿದಳು. ಮುರಳಿ, ಶ್ರೀಧರ ಆಗಲೇ ಊಟ ಮಾಡಿ ಮಲಗಿದ್ದರು. 'ಅಂತೂ ಎಂಟುಗಂಟೆ ಹೊತ್ತಿಗಾದ್ರೂ ಬಂದ್ರಲ್ಲ. ಸದ್ಯ... ನಂಗೊಬ್ಬಳಿಗೇ ವಿಪರೀತ ಭಯ ಆಗ್ತಿತ್ತು. ಇದ್ರಾ ಡಾಕ್ಟರು? ಏನಂದ್ರು?' – ಎಂದು ಪ್ರಶ್ನೆ ಹಾಕುತ್ತ ಅಡಿಗೆ ಮನೆಯಲ್ಲಿ ತಟ್ಟೆ ಹಾಕುವ ಸಿದ್ಧತೆ ನಡೆಸ ತೊಡಗಿದಳು. ಅದೇ ಪ್ರಶ್ನೆ! ಒಬ್ಬಳಿಗೆ ವಿಪರೀತ ಭಯವೆಂದು ಹೇಳಿದಳಲ್ಲ– ಇನ್ನೆರಡು ತಿಂಗಳ